ಪ್ರ.72 (192)

**ಮಾನ್ಯ ವಿಧಾನಪರಿಷತ್ತಿನ ಸದಸ್ಯರಾದ ಶ್ರೀ ಅ. ದೇವೇಗೌಡ ಇವರು ನಿಯಮ 72ರ ಮೇರೆಗೆ ನೀಡಿರುವ ಗಮನ ಸೆಳೆಯುವ ಸೂಚನಾ ಪತ್ರಕ್ಕೆ ಮಾನ್ಯ ಮುಖ್ಯಮಂತ್ರಿಯವರ ಹೇಳಿಕೆ:**

**ವಿಷಯ: ಬೆಂಗಳೂರು ರಾಜಗೋಪಾಲನಗರದ ದುಗಲಮ್ಮ ಬಡಾವಾಣೆ 4ನೇ ತಿರುವು, ನಂ.78ರ ವಸತಿ ಗೃಹಕ್ಕೆ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯವರಿಂದ ಕುಡಿಯುವ ನೀರಿನ ಸಂಪರ್ಕವನ್ನು ಪಡೆದಿದ್ದು, ಸದರಿ ನಿವಾಸಕ್ಕೆ ಅಳವಡಿಸಿದ್ದ ಕುಡಿಯುವ ನೀರಿನ ಸಂಪರ್ಕದ ಮಾಪಕವನ್ನು ನೀರು ಸರಬರಾಜು ಮಂಡಳಿಯವರು ಡಿಸೆಂಬರ್2017 ರಲ್ಲಿ ಏಕಾಏಕೀ ಹಿಂಪಡೆದು ನೀರಿನ ಸಂಪರ್ಕವನ್ನು ನಿಲ್ಲಿಸಿರುತ್ತಾರೆ. ಅಲ್ಲದೆ 2017 ರ ಜುಲೈ ಅಂತ್ಯಕ್ಕೆ ರೂ.35,000/- ರ ಬಿಲ್ಲನ್ನು ಬಾಕಿ ಎಂದು ತಿಳಿಸಿದ್ದು, ನಂತರ ಈ ಬಗ್ಗೆ ಅಂದಿನಿಂದ ನೀರು ಸರಬರಾಜು ಮಂಡಳಿಗೆ ಅನೇಕ ಅರ್ಜಿಗಳನ್ನು ಸಲ್ಲಿಸಿ ಸಂಪರ್ಕ ಕಲ್ಪಿಸಲು ಸತತವಾಗಿ ಕೋರಿದ್ದರೂ, ಸಂಪರ್ಕವನ್ನು ನೀಡದೆ ಬಿಲ್ಲನ್ನು ನೀಡದೆ ಏಕಾಏಕೀ ಫೆಬ್ರವರಿ, 2021 ಕ್ಕೆ ಒಟ್ಟು ರೂ.1,89,076/- ಮೊತ್ತದ ಬಿಲ್ಲನ್ನು ಪಾವತಿಸುವಂತೆ ಜಲಮಂಡಳಿಯವರು ಬಿಲ್ಲನ್ನು ನೀಡಿರುತ್ತಾರೆ. ಕೋವಿಡ್-19 ಪರಿಸ್ಥಿತಿಯಿಂದ ಕೆಲಸವಿಲ್ಲದೆ ತುಂಬಾ ದುಸ್ಥಿತಿಯಲ್ಲಿರುವ ಕುಟುಂಬವೊಂದರ ಶೋಚನೀಯವಾದ ಗಂಭಿರ ಪರಿಸ್ಥಿತಿಯ ಕುರಿತು.**

****

ಉತ್ತರ:

ಬೆಂಗಳೂರು ರಾಜಗೋಪಾಲನಗರದ ದುಗಲಮ್ಮ ಬಡಾವಾಣೆ 4ನೇ ತಿರುವು ನಂ.78ರ ವಸತಿ ಗೃಹಕ್ಕೆ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ಕುಡಿಯುವ ನೀರಿನ ಸಂಪರ್ಕ ಕಲ್ಪಿಸಲಾಗಿದ್ದು, ಸದರಿ ಸಂಪರ್ಕವು ಶ್ರೀ ಧನಂಜಯನ್ ರವರ ಹೆಸರಿನಲ್ಲಿದ್ದು, ಆರ್.ಆರ್. ಸಂಖ್ಯೆ: W-626063/ CMC (ಗೃಹೇತರ ಸಂಪರ್ಕ) ಯಾಗಿರುತ್ತದೆ. ಸದರಿ ಆರ್.ಆರ್. ಸಂಖ್ಯೆಯ ಬಾಕಿ ಮೊತ್ತವು ಜುಲೈ 2017 ರ ಅಂತ್ಯಕ್ಕೆ ರೂ.41,583/- ಗಳಾಗಿರುತ್ತದೆ.

ಜುಲೈ 2017 ರಿಂದ ಅಕ್ಟೋಬರ್ 2018 ರ ವರೆಗೆ ಮಾಹೆಯಾನ ಬಿಲ್ಲಿನಲ್ಲಿ ಮಾಸಿಕ ನೀರು ಮತ್ತು ಒಳಚರಂಡಿ ಶುಲ್ಕ, ಹಿಂದಿನ ಬಾಕಿ ಹಾಗೂ ಬೆಂಗಳೂರು ಜಲಮಂಡಳಿಯ ನಿಯಮಾನುಸಾರ ಬಾಕಿಯ ಮೇಲೆ ಬಡ್ಡಿಯನ್ನು ವಿಧಿಸಲಾಗುತ್ತಿದೆ. ಬಾಕಿ ಮೊತ್ತ ಹೆಚ್ಚಾಗಿದ್ದ ಕಾರಣ ಬೆಂಗಳೂರು ಜಲಮಂಡಳಿಯ ನಿಯಮ 53.1 c ರ ಅನುಸಾರ ಅಕ್ಟೋಬರ್ 2018ರಲ್ಲಿ ಸದರಿ ಕಟ್ಟಡದ ನೀರಿನ ಸಂಪರ್ಕವನ್ನು ಕಡಿತಗೊಳಿಸಲಾಗಿದೆ. ಆದರೆ, ಮಾನವೀಯತೆ ದೃಷ್ಟಿಯಿಂದ ಸದರಿ ಕಟ್ಟಡದ ಒಳಚರಂಡಿ ಸಂಪರ್ಕವನ್ನು ಕಡಿತಗೊಳಿಸಲಾಗಿರುವುದಿಲ್ಲ.

ಸದರಿ ಕಟ್ಟಡದಲ್ಲಿ ಬೋರ್‌ವೆಲ್ ಇರುವುದರಿಂದ ನವೆಂಬರ್ 2018 ರಿಂದ ಪ್ರತಿ ಮಾಹೆಗೆ ಒಳಚರಂಡಿ, ಬೋರ್‌ವೆಲ್ ಶುಲ್ಕ, ಹಿಂದಿನ ಬಾಕಿ ಹಾಗೂ ಮಂಡಳಿಯ ನಿಯಮಾನುಸಾರ ಬಾಕಿಯ ಮೇಲೆ ಬಡ್ಡಿಯನ್ನು ವಿಧಿಸಲಾಗುತ್ತಿದ್ದು ಫೆಬ್ರವರಿ 2021ಕ್ಕೆ ಒಟ್ಟಾರೆ ಬಿಲ್ಲಿನ ಮೊತ್ತವು ರೂ.1,89,076/- (ಅಸಲು ರೂ.1,21,939/-, ಬಡ್ಡಿ ರೂ.66,137/-, ತಿಂಗಳ ಬೇಡಿಕೆ ರೂ.1,000/-) ಬಾಕಿ ಇರುತ್ತದೆ. ಗ್ರಾಹಕರು ಬಾಕಿ ಮೊತ್ತವನ್ನು ಬೆಂಗಳೂರು ಜಲಮಂಡಳಿಗೆ ಪಾವತಿಸಿದ್ದಲ್ಲಿ ಸದರಿ ಸಂಪರ್ಕವನ್ನು ಮರುಕಲ್ಪಿಸಲು ಕ್ರಮ ವಹಿಸಲಾಗುವುದು.

**ಸಂಖ್ಯೆ: ನಅಇ 57 ಎಂಎಸ್ಐ 2021**

ಬಿಎಸ್

(ಬಿ.ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿ